ಕೂಡ ಪ್ರಕೃತಿಯ ಪ್ರತಿನಿಧಿಗಳೇ. ಸಿನಿಮಾದ ಕೊನೆಗೆ, ಈ ಹೆಣ್ಣುಮಕ್ಕಳು ಗಂಡಸರು ಕಟ್ಟಿಕೊಂಡ ಪೊಳ್ಳು ಗೋಡೆಗಳನ್ನು ಕೆಡವಿ, ಅವರೆಲ್ಲರ ಕುಟಿಲಸ್ಥಾನದ ಕೇಂದ್ರದಂತಿದ್ದ ಸೇಂದಿ ಅಂಗಡಿಗೆ ಬೆಂಕಿಹಚ್ಚುತ್ತಾರೆ. ಊರಿನಿಂದ ಕಳ್ಳಪೂಜಾರಿಯನ್ನು (ಮಂತ್ರವಾದಿಯನ್ನು) ಹೊಡೆದು ಓಡಿಸುವುದರ ಬೆನ್ನಿಗೇ ಸೇಂದಿ ಅಂಗಡಿಯನ್ನು ಸುಡುವುದು, ಎರಡು ಅಮಲುಗಳನ್ನು ಒಮ್ಮೆಗೇ ನಾಶಮಾಡಿದಂತಿದೆ. ಕೊನೆಯ ದೃಶ್ಯ ರಾಜಕುಮಾರ್ ನಟನೆಯ 'ಜೀವನಚೈತ್ರ' ಸಿನಿಮಾದಲ್ಲಿನ ಮದ್ಯಪಾನ ವಿರೋಧಿ ಹೋರಾಟವನ್ನು ನೆನಪಿಸುತ್ತದೆ. 'ಜೀವನಚೈತ್ರ' ಸಿನಿಮಾ ಪ್ರೇರಣೆಯಿಂದ ಕೆಲವು ಹಳ್ಳಿಗಳಲ್ಲಿನ ಮದ್ಯದ ಅಂಗಡಿಗಳನ್ನು ಹೆಣ್ಣುಮಕ್ಕಳು ಮುಚ್ಚಿಸಿದರಂತೆ. ಒಟ್ಟಿನಲ್ಲಿ, ಹೆಣ್ಣುಮಕ್ಕಳಿಗೆ ಕ್ರಾಂತಿ ಮಾಡುವ ಶಕ್ತಿಯಿದೆ ಎನ್ನುವುದನ್ನೂ ಸ್ತ್ರೀಸ್ಪರ್ಶವಿಲ್ಲದ ಯಾವ ಕ್ರಾಂತಿಯೂ ಮಾನವೀಯವಾಗಿರುವುದಿಲ್ಲ ಎನ್ನುವುದನ್ನೂ 'ಕಿರಗೂರಿನ ಗಯ್ಯಾಳಿಗಳು' ಸಿನಿಮಾ ಹಾಗೂ 'ಜೀವನಚೈತ್ರ' ಸಿನಿಮಾದ ಪರಿಣಾಮಗಳು ಹೇಳುವಂತಿವೆ.

ತೇಜಸ್ವಿಯವರ ಕಥೆಯನ್ನು ಓದಿದವರು, ಆ ಕಥೆಯ ಗುಂಗಿನಲ್ಲಿ ಇರುವವರಿಗೆ, ಸುಮನ್‌ರ ಕಿರಗೂರು ಇಷ್ಟವಾಗದಿರುವ ಸಾಧ್ಯತೆಯಿದೆ. ಮುಖ್ಯವಾಗಿ, ಕಥೆಯಲ್ಲಿನ ಪ್ರಮುಖ ಭಾಗವಾದ ಹೆಮ್ಮರದ ರೂಪಕ ಸಿನಿಮಾದಲ್ಲಿ ತೆಳುವಾಗಿದೆ. ಊರ ನಡುವಿನ ಮರ, ಸಿನಿಮಾದಲ್ಲಿ ಊರಿನ ಹೊರಗೆ ಬಂದಿರುವುದನ್ನು ನೋಡಿದರೆ ಆ ಭಾಗ ಇಲ್ಲದಿದ್ದರೂ ಸಿನಿಮಾಕ್ಕೆ ತೊಂದರೆಯಾಗುತ್ತಿರಲಿಲ್ಲ ಎನ್ನಿಸುತ್ತದೆ. ಸಾಹಿತ್ಯಕೃತಿಯೊಂದನ್ನು ದೃಶ್ಯಮಾಧ್ಯಮಕ್ಕೆ ರೂಪಾಂತರಿಸುವಾಗ ನಿರ್ದೇಶಕ ಬಳಸಿಕೊಳ್ಳಬಹುದಾದ ಸ್ವಾತಂತ್ರ್ಯವನ್ನು ಸುಮನ್ ಕೂಡ ಬಳಸಿಕೊಂಡಿದ್ದಾರೆ. ಸಾಧು ಕೋಕಿಲ ಅವರ ಸಂಗೀತ ಹಾಗೂ ಮನೋಹರ್ ಜೋಷಿ ಅವರ ಛಾಯಾಗ್ರಹಣ ಚಿತ್ರಕಥೆಯ ಓಟಕ್ಕೆ ಪೂರಕವಾಗಿದೆ. ಸಾಹಿತ್ಯಕೃತಿಯ ಹಂಗು ತೊರೆದು, ಇದನ್ನೊಂದು ಸ್ವತಂತ್ರ ಕೃತಿಯಾಗಿ ನೋಡಿದಾಗ ಸುಮನ್‌ರ ಕಿರಗೂರು ಆಪ್ತವೆನ್ನಿಸುತ್ತದೆ. ಒಂದು ಚಿತ್ರವಾಗಿ ಉಲ್ಲಾಸವನ್ನೂ ವಿಷಾದವನ್ನೂ ಮೂಡಿಸುವ ಕಿರಗೂರು, ಗ್ರಾಮಜೀವನದ ವಿವರಗಳನ್ನು ಇನ್ನಷ್ಟು ಗಾಢವಾಗಿ ಒಳಗೊಳ್ಳಬೇಕಿತ್ತು ಎನ್ನುವ ಸಣ್ಣ ಅಸಮಾಧಾನವನ್ನೂ ಉಳಿಸುತ್ತದೆ.

ಕಿರಗೂರು ಸಿನಿಮಾದ ಹಿನ್ನೆಲೆಯಲ್ಲಿ ತಲೆದೋರಿದ ಸೆನ್ಸಾರ್ ಸಮಸ್ಯೆಯನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಚಿತ್ರಕ್ಕೆ 'ಎ' ಪ್ರಮಾಣಪತ್ರ ನೀಡಿರುವುದನ್ನು ಒಪ್ಪಿಕೊಳ್ಳಬಹುದು. ಆದರೆ, ಚಿತ್ರದಲ್ಲಿನ ಕೆಲವು ಶಬ್ದಗಳನ್ನು ಮ್ಯೂಟ್ ಮಾಡಿರುವುದು ರಸಭಂಗಕ್ಕೆ ಕಾರಣವಾಗಿದೆ. ಸೆನ್ಸಾರ್ ಮಂಡಳಿಯಲ್ಲಿನ ಮಹಿಳಾ ಸದಸ್ಯರಿಗೆ ಈ ಮಾತುಗಳು ಕಿರಿಕಿರಿ ಅನ್ನಿಸಿದವಂತೆ. ಪ್ರಜ್ಞಾವಂತ ನೋಡುಗರೇ ಇನ್ನೂ ಸಾಂಪ್ರದಾಯಿಕ ನೋಡುವಿಕೆಯಿಂದ ಪಾರಾಗಲು ಕಷ್ಟವಾಗಿರುವಾಗ, 'ಕಿರಗೂರಿನ ಗಯ್ಯಾಳಿಗಳು' ಸಿನಿಮಾ ಕೂಡ ಒಂದು ರೀತಿಯ ಬಿಡುಗಡೆಯ ಹಂಬಲದ ಚಿತ್ರವೆಂದೇ ಹೇಳಬೇಕು. 2016ರಲ್ಲಿ ತೆರೆಕಂಡ ಈ ಸಿನಿಮಾ, ಕಥೆಯೂ ಸೇರಿದಂತೆ ಯಾವ ವಿಭಾಗದಲ್ಲೂ ಪ್ರಶಸ್ತಿ ಪಡೆಯಲಿಲ್ಲ ಎನ್ನುವುದನ್ನೂ, ಆ ವರ್ಷದ ರಾಜ್ಯಪ್ರಶಸ್ತಿ ಆಯ್ಕೆಸಮಿತಿಯನ್ನು ಓರ್ವ ಮಹಿಳೆಯೇ ಮುನ್ನಡೆಸಿದ್ದರು ಎನ್ನುವುದನ್ನೂ ಇಲ್ಲಿ ದಾಖಲಿಸಬೇಕು.

'ಕಿರಗೂರಿನ ಗಯ್ಯಾಳಿಗಳು' ಸಿನಿಮಾ ಸಾಲುಮರದ ತಿಮ್ಮಕ್ಕನಿಗೆ ಅರ್ಪಣೆಗೊಂಡಿದೆ. ಈ ಅರ್ಪಣೆ, ಚಿತ್ರದ ಸ್ತ್ರೀಪ್ರಧಾನ ಹಾಗೂ ಗ್ರಾಮಪ್ರಧಾನ ಗುಣಗಳಿಗೆ ಮೆರುಗು ನೀಡುವಂತಿದೆ.

✿